ಬೆಂಗಳೂರಿನಲ್ಲಿ ಗೃಹ ಮಂಡಳಿಯಿಂದ ಜಮೀನು ಖರೀದಿ

126(92) ಶ್ರೀ ರಾಮಲಿಂಗರೆಡ್ಡಿ (ಜಯನಗರ):- ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿಯ ವತಿಯಿಂದ ಬೆಂಗಳೂರು ನಗರದಲ್ಲಿ ಮನೆ ನಿರ್ಮಿಸಲು ಜಮೀನು ಖರೀದಿಸಲಾಗಿದೆಯೇ;

ಆ) ಹಾಗಿದ್ದಲ್ಲಿ ಎಲ್ಲಿ ಎಷ್ಟು ಎಕರೆ ಜಮೀನನ್ನು ಖರೀದಿಸಲಾಗಿದೆ ಹಾಗೂ ಇದಕ್ಕೆ ತಗಲಿದ ಹಣವೆಷ್ಟು;

ಇ) ಈ ಜಮೀನನ್ನು ಸ್ವಾಧೀನಪಡಿಸಿಕೊಂಡು ಮನೆ ನಿರ್ಮಾಣ ಮಾಡುವ ಕಾರ್ಯವನ್ನು ಪ್ರಾರಂಭಿಸಲಾಗಿದೆಯೇ;

ಈ) ಎಷ್ಟು ಮನೆಗಳನ್ನು ಈ ಜಮೀನುಗಳಲ್ಲಿ ನಿರ್ಮಿಸಲಾಗುವುದು;

ಉ) ಏಪ್ರಿಲ್-1997 ರಿಂದ ಇಲ್ಲಿಯವರೆಗೆ ಮನೆ ನಿರ್ಮಾಣ ಕೆಲಸವನ್ನು ಈ ಜಮೀನಿನಲ್ಲಿ ಪ್ರಾರಂಭಿಸಲಾಗಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು)

ಅ) ಹೌದು

ಆ) 1. ಕೆಂಗೇರಿ ಹೋಬಳಿ, ವಲಗೇರಹಳ್ಳಿ ಗ್ರಾಮದಲ್ಲಿ 41 ಎಕರೆ 28 ಗುಂಟೆ ಜಮೀನನ್ನು 1988ರಲ್ಲಿ ಖರೀದಿಸಲಾಗಿದೆ. ಇದಕ್ಕೆ ರೂ. 51,17,500-00 ಭೂ ಬೆಲೆ ನೋಂದಣಿ ಖರ್ಚು ರೂ. 7,67,625-00 ಒಟ್ಟು ರೂ. 58,85,125-00 ಖರ್ಚು ಆಗಿರುತ್ತದೆ.

2. ಬೆಂಗಳೂರು ಕಸಬಾ ಹೋಬಳಿ ಕಾವಲ್‌ಬೈರಸಂದ್ರ ಗ್ರಾಮದ ಎರಡು ಸರ್ವೆ ನಂ. ಗಳಲ್ಲಿ 9 ಎಕರೆ 33 ಗುಂಟೆ ಜಮೀನನ್ನು ರೂ. 8,00,000-00 ಗಳಿಗೆ ಖರೀದಿಸಲಾಗಿದೆ.

ಇ) ವಳಗೆರೆ ಗ್ರಾಮದಲ್ಲಿ ವಿವಿಧ ವರ್ಗಗಳ 2524 ಮನೆಗಳನ್ನು ಕಟ್ಟಲಾಗಿದೆ. ಕೌವಲ್ ಬೈರಸಂದ್ರದಲ್ಲಿ 349 ಮನೆಗಳನ್ನು ನಿರ್ಮಿಸಿ ಲೋಕೋಪಯೋಗಿ ಇಲಾಖಾ ವಶಕ್ಕೆ ಕೊಡಲಾಗಿದೆ.

ಈ) ಪ್ರಶ್ನೆ 3ಕ್ಕೆ ಉತ್ತರಿಸಿರುವಂತೆ ಒಟ್ಟು 2873 ಮನೆಗಳನ್ನು ಕಟ್ಟಲಾಗಿದೆ.

ಉ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.